ಪ್ರಾರ್ಥನೆ

# ಶ್ರೀಶಾರದಾದೇವಿ ಸುಪ್ರಭಾತಮ್ – ೩



**ವೀಕ್ಷಾವಿಧೂತಕಲುಷೇ ಸವಿಧಾಗತಾನಾಂ**
**ದಾಕ್ಷಾಯಣೀಪದಸರೋಜನಿಲೀನಚಿತ್ತೇ ।**
**ಅಕ್ಷಾಮಕಾಂತಿಪರಿವೇಷಲಸನ್ಮುಖಾಬ್ಜೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥ ೯ ॥**

ಕಟಾಕ್ಷಮಾತ್ರದಿಂದ ಬಳಿಬಂದವರ ಪಾಪ, ಕಲ್ಮಷಗಳನ್ನು ಹೋಗಲಾಡಿಸುವ, ದೇವಿ ಕಾಳಿಯ ಪಾದಾರವಿಂದಗಳಲ್ಲಿ ಲೀನವಾದ ಚಿತ್ತವುಳ್ಳ, ಬಾಡದ ಅಳಿಯದ ಕಾಂತಿಯಿಂದ ವಿರಾಜಮಾನವಾದ ಮುಖಕಮಲವುಳ್ಳ ಶಾರದೆ, ನಿನಗೆ ಸುಪ್ರಭಾತ.

**ವಿಶ್ವಾಭಿನಂದ್ಯಸುಗುಣೇ ಸಕಲೇಶಭಕ್ತಿ–**
**ವಿಶ್ವಾಸಪೂರ್ಣಹೃದಯೇ ವನಿತಾವರೇಣ್ಯೇ ।**
**ಆಶ್ವಾಸದಾಯಿನಿ ಸದಾ ಭವರೋಗಭಾಜಾಂ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಂ ॥ ೧೦ ॥**

ವಿಶ್ವದಲ್ಲೇ ಅಭಿನಂದಿಸಲ್ಪಡುವ ಶ್ರೇಷ್ಠವಾದ ಗುಣಗಳುಳ್ಳವಳೇ, ಸಕಲ ದೇವತೆಗಳಲ್ಲಿರುವ ಭಕ್ತಿವಿಶ್ವಾಸದಿಂದ ಪೂರ್ಣವಾದ ಹೃದಯವುಳ್ಳ ಶ್ರೇಷ್ಠ ವನಿತೆಯೆ, ಭವರೋಗಿಗಳಿಗೆ ಸದಾ ಆಶ್ವಾಸನೆಯನ್ನು ನೀಡುವ ಜನನಿ ಶಾರದೆ, ನಿನಗೆ ಸುಪ್ರಭಾತ.

**ಯೋಗೇಶ್ವರೇಶ್ವರಮಹಾಗುರುಧರ್ಮಪತ್ನಿ**
**ಸರ್ವಾರ್ಥದೇ ಸಕಲಶಕ್ತ್ಯವತಾರರೂಪೇ ।**
**ಆರ್ತಪ್ರಪನ್ನಪರಿಪಾಲನಬದ್ಧದೀಕ್ಷೇ**
**ಶ್ರೀ ಶಾರದೇ ಸುಚರಿತೇ ತವ ಸುಪ್ರಭಾತಮ್ ॥ ೧೧ ॥**

ಯೋಗೇಶ್ವರರಿಗೂ ಈಶ್ವರನಾದ ಮಹಾಗುರುವಿನ ಧರ್ಮಪತ್ನಿ, ಸಕಲ ವಿಧದ ಐಶ್ವರ್ಯದಾತೆ, ಸಮಸ್ತ ಶಕ್ತಿಗಳ ಅವತಾರ ಸ್ವರೂಪಿಣಿ, ಆರ್ತರನ್ನೂ ಮೊರೆಹೊಕ್ಕವರನ್ನೂ ರಕ್ಷಿಸುವೆನೆಂಬ ದೀಕ್ಷೆಯುಳ್ಳ ತಾಯಿ ಸುಚರಿತೆ, ಶಾರದೆ, ನಿನಗೆ ಸುಪ್ರಭಾತ.

— ಸ್ವಾಮಿ ಜ್ಞಾನಾನಂದ ಸರಸ್ವತೀ

ಸೂಕ್ತಿಪ್ರಭ

## ಸೂಫೀ ಸೂಕ್ತಿಗಳು

**ನಾ**ನು ದೇವರನ್ನು ಹುಡುಕಿದೆ; ಆದರೆ ನನ್ನನ್ನೇ ಕಂಡುಕೊಂಡೆ. ನನ್ನನ್ನು ನಾನು ಹುಡುಕಿದೆ, ಆದರೆ ನಾನು ದೇವರನ್ನೇ ಕಂಡೆ.

—ರೂಮಿ

**ಎ**ಲ್ಲ ಚರ್ಚ್, ಮಸೀದಿ, ದೇಗುಲಗಳಲ್ಲಿ
ಎಂಥದೇ ದೇವಮಂದಿರಗಳಲ್ಲಿ ನನಗೆ ಪ್ರೀತಿ;
ಕಾರಣ, ನಾ ಬಲ್ಲೆ—
ಹಲವು ನಾಮಗಳನಲ್ಲಿ ಜಪಿಸುವರು
ಒಂದೇ ದೇವರ ನಾಮವನು.

—ಹಫೀಜ್

**ನ**ನ್ನ ಹೃದಯದ ಕಣ್ಣಿಂದ ನಾನು ನನ್ನ ದೇವರನ್ನು ಕಂಡೆ, ಬಳಿಕ ಕೇಳಿದೆ, ''ನೀನು ಯಾರು?'' ಅವನು ಉತ್ತರ ಕೊಟ್ಟ:

''ನೀನು!''

—ಮನ್ಸೂರ್ ಅಲ್-ಹಲ್ಲಾಜ್

**ದೇ**ವರ ಸ್ನೇಹಿತನು ನದಿಯಂತೆ ಉದಾರನಾಗಿರಬೇಕು. ಬಾಯಾರಿಕೆಯನ್ನು ನೀಗಲು ನಾವೆಲ್ಲ ನದಿಯಿಂದ ನೀರನ್ನು ತಗೆದುಕೊಳ್ಳುತ್ತೇವೆ. ನಾವು ಒಳ್ಳೆಯವರೋ, ಕೆಟ್ಟವರೋ; ಅಥವಾ ಬಂಧುಗಳೋ, ಅಪರಿಚಿತರೋ ಎಂದು ಆ ನದಿಯು ಭೇದಭಾವವನ್ನು ಹೊಂದಿರುವುದಿಲ್ಲ.

—ಖಾವಜ ಮೊಯಿನುದ್ದೀನ್ ಚಿಸ್ತಿ

**ನಿ**ಜ, ನೀನು ಸಾವಿರ ಗ್ರಂಥಗಳನ್ನೋದಿದೆ; ಆದರೆ ನಿನ್ನ ಆತ್ಮವನ್ನು ಓದಲು ನೀನು ಯತ್ನಿಸಲಿಲ್ಲ. ನೀನು ದೇಗಲಗಳಿಗೆ, ಮಸೀದಿಗಳಿಗೆ ಪ್ರವೇಶ ಮಾಡಿದೆ; ಆದರೆ ನಿನ್ನ ಹೃದಯವನ್ನೇ ನೀನು ಪ್ರವೇಶ ಮಾಡಲಿಲ್ಲ. ಹಲವು ದೆವ್ವಗಳೊಂದಿಗೆ ನೀನು ವ್ಯರ್ಥ ಹೋರಾಟ ಮಾಡಿದೆ; ಏಕೆಂದರೆ ನೀನು ನಿನ್ನ ಒಳಗಿನ ಆಸೆಗಳೊಂದಿಗೆ ಹೋರಾಡಲು ಯತ್ನಿಸಲೇ ಇಲ್ಲ.

—ಬುಲ್ಲೇ ಶಾಹ